International Journal of Kannada Research
www.kannadajournal.com

ISSN: 2454–5813
IJKR 2023; 9(2): 48-49
© 2023 IJKR
www.kannadajournal.com
Received: 19-02-2023
Accepted: 24-03-2023

**ಡಾ. ಬಸ್ತ್ಯಾಂವ್ ಪಾಯ್ಸ್**
ಕನ್ನಡ ಪ್ರಾಧ್ಯಾಪಕರು, ಸಂತ ಫಿಲೋಮಿನಾ ಕಾಲೇಜು, ಪುತ್ತೂರು, ಕರ್ನಾಟಕ, ಭಾರತ

**Corresponding Author:**
**ಡಾ. ಬಸ್ತ್ಯಾಂವ್ ಪಾಯ್ಸ್**
ಕನ್ನಡ ಪ್ರಾಧ್ಯಾಪಕರು, ಸಂತ ಫಿಲೋಮಿನಾ ಕಾಲೇಜು, ಪುತ್ತೂರು, ಕರ್ನಾಟಕ, ಭಾರತ

# ಪಿ. ಲಂಕೇಶ್ ಅವರ 'ತೆರೆಗಳು' ನಾಟಕ ಒಂದು ವಿಶ್ಲೇಷಣೆ

**ಡಾ. ಬಸ್ತ್ಯಾಂವ್ ಪಾಯ್ಸ್**

**ಪೀಠಿಕೆ**

ಹೊಸಗನ್ನಡ ಸಾಹಿತ್ಯದಲ್ಲಿ ನಾಟಕ ಎಂಬ ಸಾಹಿತ್ಯ ಪ್ರಕಾರ ೨೦ನೇ ಶತಮಾನದಲ್ಲಿ ತನ್ನ ಅಸ್ತಿತ್ವವನ್ನು ಕಂಡುಕೊಂಡರೂ ಒಂದು ಶತಮಾನದ ಅವಧಿಯಲ್ಲೇ ಈ ಪ್ರಕಾರದಲ್ಲಿಯೇ ವಸ್ತುವಿನ ದೃಷ್ಟಿಯಿಂದ ಪೌರಾಣಿಕ, ಐತಿಹಾಸಿಕ, ಸಾಮಾಜಿಕ, ಜಾನಪದ ನಾಟಕಗಳೆಂದೂ, ಪ್ರದರ್ಶನದ ದೃಷ್ಟಿಯಿಂದ ಹವ್ಯಾಸಿ ರಂಗಭೂಮಿ, ಜನಪದ ರಂಗಭೂಮಿ ಎಂದೂ ರೂಪದ ದೃಷ್ಟಿಯಿಂದ ಮುಕ್ತ ರಂಗಭೂಮಿ, ವೃತ್ತಿರಂಗಭೂಮಿ, ಸಾಂಪ್ರಾದಾಯಿಕ ರಂಗಭೂಮಿ ಮತ್ತು ಸಂಗತ ರಂಗಭೂಮಿ ಎಂದೂ ಬಹುಮುಖಿಯಾಗಿ ಬೆಳೆದಿದೆ. ಅಂತೆಯೇ ಪಿ.ಲಂಕೇಶ್ ಅವರ 'ತೆರೆಗಳು' ನಾಟಕ ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟವಾಗಿದೆ.

ಒಬ್ಬ ಲೇಖಕ ಯಾವುದೇ ಕೃತಯನ್ನು ರಚಿಸುವುದರ ಹಿಂದೆ ಒಂದು ನಿರ್ದಿಷ್ಟವಾದ ಉದ್ದೇಶ ಇದ್ದೇ ಇರುತ್ತದೆ. ಕೇವಲ ಕಥೆಯನ್ನು ಹೇಳುವುದೇ ಆ ಲೇಖಕನ ಉದ್ದೇಶವಾಗಿರುವುದಿಲ್ಲ. ಕಥೆಯ ಮೂಲಕ ತಾನು ಕಂಡುಕೊಂಡ ಅನುಭವ ವಿಶೇಷವನ್ನು ಅಥವಾ ಜೀವನ ಸತ್ಯಗಳನ್ನು ನಿರೂಪಿಸುವುದು ಅವನ ಆಶಯವಾಗಿರುತ್ತದೆ. ಪಿ.ಲಂಕೇಶ್ ಅವರ 'ತೆರೆಗಳು' ನಾಟಕವನ್ನು ಅದರ ವಸ್ತು ಮತ್ತು ರೂಪವನ್ನು ಬೇರ್ಪಡಿಸಿ ಅಧ್ಯಯನ ಮಾಡುವುದು ಸೂಕ್ತವಾದ ವಿಧಾನವೆನ್ನಿಸುವುದಿಲ್ಲ. ಏಕೆಂದರೆ 'ತೆರೆಗಳು' ನಾಟಕದ ವಸ್ತುವಿಗಿರುವಷ್ಟೇ ಮಹತ್ವ ಅದರ ರೂಪಕ್ಕೂ ಇದೆ.

ಮಹತ್ವಾಕಾಂಕ್ಷೆಯ ವ್ಯಕ್ತಿಯೊಬ್ಬ ಸಂದರ್ಭಗಳನ್ನು ತನ್ನ ಸ್ವಾರ್ಥಕ್ಕೆ ಬಳಸಿಕೊಂಡು ಹೇಗೆ ಮೇಲು ಮೇಲಕ್ಕೆ ಏರುತ್ತಾನೋ ಹಾಗೆಯೇ ಅದೇ ವ್ಯವಸ್ಥೆಯ ಹಗ್ಗದ ಕುಣಿಕೆಗೆ ಕೊರಳು ಕೊಟ್ಟು ಕೆಳ ಕೆಳಕ್ಕೆ ಇಳಿಯಬೇಕಾದ ದುರಂತ ಸತ್ಯವನ್ನು ಈ ನಾಟಕ ಬಿಂಬಿಸುತ್ತದೆ. ಸಮಾಜದ ಕಣ್ಣು ತಪ್ಪಿಸಿ ಕಳ್ಳತನ, ವಂಚನೆ, ಮೋಸ, ವ್ಯಭಿಚಾರ ಕೊಲೆಯಂತಹ ದುಷ್ಕೃತ್ಯಗಳನ್ನು ನಡೆಸಿದರೂ ಅದೇ ಸಮಾಜದ ಹಿಡಿತಕ್ಕೆ ಸಿಲುಕಿದಾಗ ಬಿಡಿಸಿಕೊಳ್ಳಲು ಸಾಧ್ಯವಾಗದೆ ಅಸಾಹಯಕನಾಗುವ ಸತ್ಯವನ್ನು ನಾಟಕ ಪರಿಣಾಮಕಾರಿಯಾಗಿ ನಿರೂಪಿಸುತ್ತದೆ. 'ತೆರೆಗಳು' ನಾಟಕದ ವ್ಯಕ್ತಿ ಮೂಲತಃ ಒಬ್ಬ ಆದರ್ಶ ಅಧ್ಯಾಪಕ. ದೇಶ, ಜನ, ಪ್ರೀತಿ, ಜಾತ್ಯಾತೀತತೆ ಮೊದಲಾದ ಮೌಲ್ಯಗಳನ್ನು ಕುರಿತು ವಿದ್ಯಾರ್ಥಿಗಳಿಗೆ ಪಾಠ ಹೇಳುತ್ತಿದ್ದನು. ಈ ವೃತ್ತಿಯಿಂದ ಸಂತೃಪ್ತನಾಗದೆ ವ್ಯಾಪಾರ, ವ್ಯಭಿಚಾರ, ಕೊಲೆ, ಕಂಟ್ರಾಕ್ಟಿನಂತಹ ಕೆಲಸಗಳನ್ನು ಮಾಡಿ ಹಣಗಳಿಸಿ ಮೇಲೆ ಬಂದು ತನ್ನ ದುಷ್ಕೃತ್ಯಗಳನ್ನು ಮುಚ್ಚಿಹಾಕಿರುವವನು. ಇವನು ಎಷ್ಟು ಸ್ವಾರ್ಥಿ ಮತ್ತು ವಂಚಕನೋ ಸಮಾಜ ಕೂಡ ಅಷ್ಟೇ ನಿಷ್ಠೂರ ಮತ್ತು ಸತ್ಯವಾದಿ. ಸಮಾಜದ ಕೂಸಾದ ಈ ವ್ಯಕ್ತಿ ತನ್ನ ಶಿಷ್ಯರಿಂದಲೇ ನೇಣುಗಂಬಕ್ಕೇರುವ ದುರಂತವನ್ನು ಕಾಣುತ್ತೇವೆ. ಸ್ವಾರ್ಥಕ್ಕಾಗಿ ಮಾಡಬಾರದ್ದನ್ನು ಮಾಡಿದರೆ ಕಾಣಬಾರದ್ದನ್ನು ಕಣಬೇಕಾಗುತ್ತದೆ. ಪರಿಸ್ಥಿತಿ ತನಗೆ ವಿರುದ್ಧ ದಿಕ್ಕಿನಲ್ಲಿ ಚಲಿಸತೊಡಗಿದಾಗ ವ್ಯಕ್ತಿ ಅಸಾಹಯಕನಾಗುತ್ತಾನೆ, ದುರ್ಬಲನಾಗುತ್ತಾನೆ ಎಂಬ ಸತ್ಯವನ್ನು 'ತೆರೆಗಳು' ನಾಟಕ ಪ್ರತಿಪಾದಿಸುತ್ತದೆ.

ವ್ಯಕ್ತಿಯ ಅಸಾಹಯಕತೆಯ ಮೇಲೆ ನಿಂತು ಅಟ್ಟಹಾಸ ಮಾಡುವ ವ್ಯವಸ್ಥೆಯ ಕ್ರೌರ್ಯವನ್ನೂ ಈ ನಾಟಕ ಪ್ರತಿಪಾದಿಸುತ್ತದೆ. ಈ ನಾಟಕದಲ್ಲಿ ಆಗಂತುಕರಾಗಿ ಪ್ರವೇಶಿಸುವ ಕಿಟ್ಟಿ, ವಿಟ್ಟಿ, ಕಂಠಿಯರು ಇಂತಹ ವ್ಯವಸ್ಥೆಯ ಪ್ರತಿನಿಧಿಗಳಾಗಿದ್ದಾರೆ. ಯಾರೇ ಒಬ್ಬ ತನ್ನ ಹಿಂದಿನ ಬದುಕಿನಲ್ಲಿ ಮಾಡಿರಬಹುದಾದ ತಪ್ಪನ್ನುಒಪ್ಪಿಕೊಂಡು, ನ್ಯಾಯಯುತ ಜೀವನ ಮಾಡಲು ಬಿಟ್ಟುಕೊಡುವಂತೆ ಕೇಳಿಕೊಂಡರೂ ವ್ಯವಸ್ಥೆ ಅವನನ್ನು ಅನೇಕ ರೀತಿಯಲ್ಲಿ ಹಿಂಸಿಸುವ ಕ್ರೂರ ವ್ಯಂಗ್ಯವನ್ನು ನಾಟಕದ ಆಗಂತುಕರ ಮೂಲಕ ಚಿತ್ರಿಸಲಾಗಿದೆ.

ಇಲ್ಲಿ ವ್ಯಕ್ತಿತನ್ನ ಉಳಿವು ಮತ್ತು ಬೆಳವಣಿಗೆಗಾಗಿ ಅಧ್ಯಾಪಕ ವೃತ್ತಿಯನ್ನು ಬಿಟ್ಟು ಅನ್ಯಮಾರ್ಗವನ್ನು ಹಿಡಿಯುತ್ತಾನೆ. ಯಜಮಾನನ್ನು ಕೊಲ್ಲುತ್ತಾನೆ, ವ್ಯವಹಾರ, ಬಡ್ಡಿವ್ಯವಹಾರ ದಂತಹ ಅನೈತಿಕ ವ್ಯವಹಾರಗಳಲ್ಲಿ ತೊಡಗುತ್ತಾನೆ. ತನ್ನ ಈ ದುಷ್ಕೃತ್ಯಗಳ ಸಮರ್ಥನೆಗಾಗಿ ಕಂಟ್ರಾಕ್ಟು, ರಾಜಕಾರಣ, ಅಧಿಕಾರದಂತಹ ಆಳುವ ವ್ಯವಸ್ಥೆಯ ಭಾಗವಾಗುತ್ತಾನೆ. ಅಂದರೆ ತನ್ನೊಬ್ಬನ ಏಳಿಗೆಗಾಗಿ ಇಡೀ ವ್ಯವಸ್ಥೆಯನ್ನು ದುರ್ಬಳಕೆ ಮಾಡಿಕೊಳ್ಳುತ್ತಾನೆ. ವ್ಯಕ್ತಿ ಎಷ್ಟೇ ದೊಡ್ಡವನಾಗಲಿ, ಜಾಣನಾಗಲಿ, ಸತ್ಯದ ಕೈಗೆ ಒಂದಲ್ಲ ಒಂದು ದಿನ ಸಿಕ್ಕಿ ಬೀಳಬೇಕಾಗುತ್ತದೆ. ಅಂತಹ ದಿನ ಬಂದಾಗ ತನಗಾಗುವ ದುರವಸ್ಥೆ ಅಥವಾ ಸಾವಿಗೆ ಹೆದರಿ ಬದುಕಿಗಾಗಿ ಅಂಗಲಾಚುತ್ತಾನೆ. ಆದರೆ ಪರಿಸ್ಥಿತಿ ಆತನ ನಿಯಂತ್ರಣ

ತಪ್ಪುವುದರಿಂದ ತನ್ನ ಪಾಪಕ್ಕೆ ತಕ್ಕ ಶಿಕ್ಷೆ ಅನುಭವಿಸಬೇಕಾಗುತ್ತದೆ. ಈ ವೇಳೆಗೆ ಅವನ ದುಃಖಕ್ಕಾಗಲಿ, ಪಶ್ಚಾತಾಪಕ್ಕಾಗಲಿ ಅರ್ಥ ಉಳಿಯುವುದಿಲ್ಲ. ಆದ್ದರಿಂದ ಶಿಕ್ಷೆ ಅಥವಾ ಸಾವನ್ನು ಆತ ಎದುರಿಸಬೇಕಾಗುತ್ತದೆ ಎಂಬ ಸಂದೇಶವನ್ನು ನಾಟಕ ನೀಡುತ್ತದೆ.

ವ್ಯಕ್ತಿ ನೈತಿಕ ಮೌಲ್ಯಗಳನ್ನು ದುರ್ಬಳಿಕೆ ಮಾಡಿಕೊಂಡರೆ ಸಮಾಜ ವ್ಯಕ್ತಿ ಬದುಕನ್ನೇ ಬಲಿ ತೆಗೆದುಕೊಳ್ಳುತ್ತದೆ ಎಂಬ ನಿಲುವನ್ನು ನಾಟಕ ತಿಳಿಯಪಡಿಸುತ್ತದೆ. ವ್ಯಕ್ತಿ ಎಷ್ಟೇ ದೊಡ್ಡವನಾದರೂ ಆತ ಕೇವಲ ಸಮಾಜದ ಕೂಸು, ಸಮಾಜ ತನ್ನ ರೌದ್ರತೆಯನ್ನು ತೋರಿಸದೇ ಬಿಡುವುದಿಲ್ಲ. ಈ ನಾಟಕದಲ್ಲಿ ಬರುವ ಪಾತ್ರಗಳಾದ ಕಂಠಿ, ವಿಟ್ಟಿ, ಕಿಟ್ಟಿಯರು ಒಂದು ಕಾಲದಲ್ಲಿ 'ವ್ಯಕಿ'ಯ ವಿದ್ಯಾರ್ಥಿಗಳೇ ಆಗಿದ್ದರು. ಎಲ್ಲಿಯವರೆಗೆ 'ವ್ಯಕ್ತಿ' ಆದರ್ಶ ಉಪನ್ಯಾಸಕನಾಗಿದ್ದನೋ ಅಲ್ಲಿಯವರೆಗೆ ಇವರು ಅವನ ವಿದ್ಯಾರ್ಥಿಗಳು. ಯಾವಾಗ 'ವ್ಯಕ್ತಿ' ತನ್ನ ದಾರಿ ತಪ್ಪಿ ವಿದ್ಯಾರ್ಥಿಗಳನ್ನು ವಂಚಿಸಿ, ಯಜಮಾನನ್ನು ಕೊಂದಿದ್ದು, ವ್ಯಾಪರ, ವ್ಯಭಿಚಾರದಂತಹ ದುರ್ವ್ಯವಹಾರಗಳಲ್ಲಿ ತೊಡಗಿದ್ದ ವ್ಯಕ್ತಿಯ ನೀಚತನವನ್ನು ಬಯಲಿಗೆಳೆದು ಆತನಿಗೆ ತಕ್ಕ ಶಿಕ್ಷೆ ಕೊಡಿಸುವ ಕೆಲಸದಲ್ಲಿ ನಿರತರಾಗುತ್ತಾರೆ. ಆದರೆ ಈ ಮೂವರ ತನಿಖೆ ಕೂಡ ನೈತಿಕ ನೆಲೆಯಲ್ಲಿಲ್ಲದಿರುವುದು ನಮ್ಮ ತನಿಖಾ ವ್ಯವಸ್ಥೆಯ ಮತ್ತು ಸಾಮಾಜಿಕ ವ್ಯವಸ್ಥೆಯ ದುರಂತವನ್ನು ಧ್ವನಿಸುತ್ತದೆ. ಇವರು ಬಳಸುವ ಭಾಷೆ, ವ್ಯಕ್ತಿ ವೇಷದ ತೆರೆಗಳನ್ನು ಸರಿಸಿ ಪಾಪದ ಕಂತೆಯನ್ನು ಹೊರತರುವಲ್ಲಿ ಬಳಸುವ ತಂತ್ರ, ಕುತರ್ಕ ಇತ್ಯಾದಿಗಳು ಅಮಾನವೀಯ ಮತ್ತು ಕ್ರೂರ ವರ್ತನೆಗಳಾಗಿ ತೋರುತ್ತವೆ.

ಹೀಗೆ 'ತೆರೆಗಳು' ವ್ಯಕ್ತಿಯ ಹಾಗೂ ವ್ಯವಸ್ಥೆಯ ನೈತಿಕ ಅದಃ ಪತನವನ್ನು ಬಹಳ ಸಮರ್ಥವಾಗಿ ಪ್ರತಿಪಾದಿಸುತ್ತದೆ.

**ಆಕರಗ್ರಂಥಗಳು**

೧. 'ತೆರೆಗಳು' ನಾಟಕ: ಪಿ.ಲಂಕೇಶ್
೨. ಪ್ರಥಮ ಬಿ.ಸಿ.ಎ ಪಠ್ಯ